ಬದ್ಧತೆಯು ಎಷ್ಟರ ಮಟ್ಟಿಗಿನದು ಎಂದು ನಾನು ಅಚ್ಚರಿಪಡುತ್ತೇನೆ. ನಾನು ಇಂಟರ್ನೆಟ್ ಪೂರ್ವದಲ್ಲಿ ನನ್ನ ಯೌವನವನ್ನು ಕಳೆದೆ. ಈಗಿನ ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಾಗ, ನನಗೇನೂ ಹೊಳೆಯುವುದಿಲ್ಲ. ಈಗ ಮಾಹಿತಿಯ ಮಹಾಪೂರವೇ ನಮ್ಮ ಮುಂದಿದೆ. ಅದರಿಂದ ಏನನ್ನು ಆಯ್ಕೆ ಮಾಡಿಕೊಳ್ಳಬೇಕು, ಏನನ್ನು ಅನ್ವಯಿಸಿಕೊಳ್ಳಬೇಕು, ಯಾವ ಅಭ್ಯಾಸ ಮಾಡಬೇಕು, ಸಾಧಕರು ಹೇಗೆ ಶಿಸ್ತಿನಿಂದ ಇರಬೇಕು ಎಂಬ ಮೂಲ ಮಾಹಿತಿಯೇ ವಿದ್ಯಾರ್ಥಿಗಳಿಗೆ ದೊರೆಯುತ್ತಿಲ್ಲ. ಅದನ್ನೇನಾದರೂ ಹೇಳಿಕೊಡೋಣ ಎಂಬ ಮನಸ್ಸು ಹಿರಿಯರಿಗೆ ಇದ್ದರೂ, ವಿದ್ಯಾರ್ಥಿಗಳಿಗೆ ಇರುವ ಸಾವಿರಾರು ಅಡಚಣೆಗಳಿಂದ ಅವರನ್ನು ಬೇರ್ಪಡಿಸಿ ಒಂದೆಡೆ ಕುಳಿತುಕೊಳ್ಳುವಂತೆ ಮಾಡುವುದೇ ಕಷ್ಟವಾಗಿದೆ. ಕಿನಾರೆಗಳೇ ಕಾಣಿಸದ ಮಾಹಿತಿಯ ಮಹಾನ್ ಸಾಗರದಲ್ಲಿ ಎಲ್ಲರೂ ತೇಲುತ್ತಿರುವಂತೆ ಭಾಸವಾಗುತ್ತದೆ. ಯಾವುದೇ ಕೇಂದ್ರಬಿಂದುವಿಲ್ಲ, ಸಾಧಿಸಬೇಕು ಎನ್ನುವ ಫೋಕಸ್ ಕಾಣಿಸುತ್ತಿಲ್ಲ ಇಲ್ಲಿ. ಇಂತಹ ಬೇಸರವೊಂದು ನನ್ನ ಬರವಣಿಗೆಗಳಲ್ಲಿ ನುಸುಳಿರಲೂಬಹುದು. ಅದನ್ನು ಓದುಗರು ನಿರ್ಣಯಿಸಬೇಕಷ್ಟೇ.

◆ **ಬರವಣಿಗೆಯ ಕೆಲಸವನ್ನು ಕಲಾವಿದರು ಹೆಚ್ಚು ಇಷ್ಟಪಡುವುದಿಲ್ಲ ಎನಿಸುತ್ತದೆ. ಅಂತಹ ಸಂದರ್ಭದಲ್ಲಿ ನೀವು 'ಅಟೆಂಡೆನ್ಸ್' ಎಂಬ ವಾರ್ಷಿಕ ಪತ್ರಿಕೆಯ ಸಂಪಾದಕರಾಗಿ ಕಳೆದ 24 ವರ್ಷಗಳಿಂದ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಈ ಪಯಣವನ್ನು ವಿವರಿಸಬಹುದಾ ?**

ಕಲಾವಿದರು ಸ್ವಯಂಕೇಂದ್ರಿತವಾಗಿಯೇ ಇತ್ತೀಚೆಗೆ ಯೋಚಿಸುತ್ತಿದ್ದಾರೆ ಎನ್ನುವುದು ನಿಜ. ಪ್ರಸಿದ್ಧಿಯ ರಂಗಿನಲ್ಲಿ ಅವರು ತಮ್ಮನ್ನು ತಾವು ಬ್ರಹ್ಮಜ್ಞಾನಿಗಳಾಗಿದ್ದೇವೆ ಎಂದು ಪರಿಗಣಿಸಿಕೊಂಡಿರುತ್ತಾರೆ. ನನ್ನ ಮಾತುಗಳು ತುಸು ಕಟುವಾಗಿದ್ದರೂ ಸತ್ಯ. ಆದ್ದರಿಂದಲೇ ಅವರು ಸ್ವಾಧ್ಯಾಯಕ್ಕೆ ಹೆಚ್ಚು ಒತ್ತು ಕೊಡುವುದಿಲ್ಲ. ಅವರ ಅನಿಸಿಕೆಗೆ ಮತ್ತಷ್ಟು ನೀರೆರೆಯಲು ಸಾಮಾಜಿಕ ಜಾಲತಾಣಗಳಿವೆ. ವೈಯಕ್ತಿಕ ಬ್ಲಾಗ್‌ಗಳಲ್ಲಿ ಹೊಗಳಿಕೆಯ ಮಹಾಪೂರವನ್ನೇ ಬರೆದುಕೊಳ್ಳಬಹುದು. ಅಲ್ಲಿ ವಾಸ್ತವವನ್ನು ಸಂಪೂರ್ಣವಾಗಿ ಮರೆಮಾಚಬಹುದು. ಇಷ್ಟೊಂದು ದೊಡ್ಡ ದೇಶದಲ್ಲಿ ಇಷ್ಟೊಂದು ಶ್ರೀಮಂತವಾದ ದೇಶದಲ್ಲಿ ಕನಿಷ್ಠ 5 ನೃತ್ಯಪತ್ರಿಕೆಗಳು ಇಲ್ಲವೆಂದರೆ ಅದು ಬೇಸರದ ಸಂಗತಿ. ಹಾಗಿದ್ದರೆ ಈ ಅಂತರ ಸೃಷ್ಟಿಯಾಗಲು ಕಾರಣವೇನು?

'ಅಟೆಂಡೆನ್ಸ್' ಪತ್ರಿಕೆಯು ಇಂಟರ್ನೆಟ್ ಯುಗಕ್ಕಿಂತ ಮೊದಲೇ ಆರಂಭವಾಯಿತು. ಮುಖ್ಯವಾಹಿನಿಯ ಪತ್ರಿಕೆಗಳು ನಿಧಾನವಾಗಿ ಕಲಾಪ್ರಕಾರಗಳಿಗೆ ಮೀಸಲಾದ ಜಾಗವನ್ನು ಕಡಿಮೆ ಮಾಡುತ್ತ ಬಂದವು. ಆ ಜಾಗವನ್ನು ಫ್ಯಾಷನ್, ಫಿಲ್ಮ್, ಫೈನಾನ್ಸ್ ಮತ್ತು ಲೈಫ್‌ಸ್ಟೈಲ್ ಎಂಬ ಕ್ಷೇತ್ರಗಳು ಆಕ್ರಮಿಸಿಕೊಳ್ಳಲು ಆರಂಭಿಸಿದವು. ಅಂತಹ ಸಂದರ್ಭದಲ್ಲಿ 'ಅಟೆಂಡೆನ್ಸ್' ಪತ್ರಿಕೆಯು ವಿಶೇಷವಾಗಿ ನೃತ್ಯ, ನೃತ್ಯದ ಇತಿಹಾಸ ಮತ್ತು ಪರಂಪರೆಯನ್ನು ಬಿಂಬಿಸುವ ವಾರ್ಷಿಕ ಪುಸ್ತಕವಾಗಿ(ಇಯರ್ ಬುಕ್)ಹೊರಹೊಮ್ಮಿತು. ಅಲ್ಲಿ ಶೈಕ್ಷಣಿಕ ಕ್ಷೇತ್ರದ ಪ್ರಾತಿನಿಧ್ಯವಿದೆ. ಜಗತ್ತಿನ ಹಲವು ದೇಶಗಳ ಪ್ರೇಕ್ಷಕರು ಅಲ್ಲಿ ಓದುಗರಾಗಿ ಕಲೆಯ ಬಗ್ಗೆ ತಿಳಿದುಕೊಳ್ಳುತ್ತಾರೆ. ಸಿನಿಮಾ ಮತ್ತು ಫ್ಯಾಷನ್ ವಲಯದಲ್ಲಿರುವ ಓದುಗರು ನೃತ್ಯದ ಒಳಹೊರಗುಗಳನ್ನು ಆಗುಹೋಗುಗಳನ್ನು ತಿಳಿದುಕೊಳ್ಳಲಿ ಎಂಬ ಕಾರಣಕ್ಕಾಗಿ ಈ ಪತ್ರಿಕೆಯಲ್ಲಿ ಈ ಎರಡು ಕ್ಷೇತ್ರಕ್ಕೂ ಪ್ರಾತಿನಿಧ್ಯವಿದೆ. ಇವೆರಡೂ ಕಲಾಪ್ರಕಾರಗಳೇ ಆಗಿವೆ ಎನ್ನುವುದನ್ನು ಒಪ್ಪೋಣ. ಕಲೆಯೆಂಬುದು ಸದಾ ನಮಗಿಂತ ದೊಡ್ಡದು. ರಾಜ್ಯಗಳನ್ನು ಕೇಂದ್ರೀಕರಿಸಿ ಕೆಲವು ಸಂಚಿಕೆಗಳು ಪ್ರಕಟವಾದವು. ಉದಾಹರಣೆಗೆ, 2005ರಲ್ಲಿ ನಾವು ಗುಜರಾತ್‌ನ ಕಲಾಪ್ರಕಾರಗಳ ಬಗ್ಗೆ ಸಂಚಿಕೆ ರೂಪಿಸಿದೆವು. ಕೊರಿಯೋಗ್ರಫಿಯ ಅಂತರಂಗ ಬಹಿರಂಗವು ಮತ್ತೊಂದು ಸಂಚಿಕೆಯ ಥೀಮ್ ಆಗಿತ್ತು. ಈಶಾನ್ಯ ಭಾರತದ ಸಂಪ್ರದಾಯಗಳು, ಆಂಧ್ರಪ್ರದೇಶದ ಕಲಾಭಿವ್ಯಕ್ತಿ... ಹೀಗೆ ಪ್ರತಿ ಸಂಚಿಕೆಯೂ ಸಂಗ್ರಾಹ್ಯವಾಗಿ ಮೂಡಿ ಬಂದಿದೆ. ಆದರೆ ಈ ಸಂಚಿಕೆಗಳನ್ನು ರೂಪಿಸುವ ಜ್ಞಾನವಷ್ಟೇ ನಮಗಿದೆ. ಅದನ್ನು ಮಾರ್ಕೆಟಿಂಗ್ ಮಾಡುವ ಜ್ಞಾನ ಇಲ್ಲ. ಹಾಗಾಗಿ ಈ ಪತ್ರಿಕೆಯನ್ನು ಹೆಚ್ಚು